

# ದಲೈ ಲಾಮಾ ಭಾರತಪ್ರೀತಿ

ಜನಸಮುದಾಯ ತುಂಬ ಪ್ರೀತಿಸುವ ನಾಯಕ/ಕಿ ತೀರಿಕೊಂಡಾಗ 'ಮತ್ತೊಮ್ಮೆ ಹುಟ್ಟಿ ಬಾ' ಎಂದು ಹಾರೈಸುವುದು ಸಹಜ. ಆದರೆ ಇದು ಅಂತಹ ಪ್ರಕರಣವಲ್ಲ. 'ಮರಣ ಹೊಂದುವ ನಾಯಕ ಆ ಕ್ಷಣವೇ ಇನ್ನೊಂದೆಡೆ ಖಂಡಿತವಾಗಿ ಹುಟ್ಟಿ ಬರುತ್ತಾನೆ' ಎನ್ನುವ ಪುನರ್ಜನ್ಮದ ನಂಬಿಕೆ. ಟಿಬೆಟಿಯನ್ ಬೌದ್ಧ ಧರ್ಮೀಯರಲ್ಲಿ ಈ ನಂಬಿಕೆ ಧರ್ಮದ ಅಸ್ತಿತ್ವದ ಪ್ರಶ್ನೆಯೂ ಹೌದು. ಈಗ ಟಿಬೆಟಿಯನ್ ಬೌದ್ಧರ ವಿಶ್ವಗುರುವಾಗಿರುವ ದಲೈ ಲಾಮಾ ಮುಂದೆ ಭಾರತದಲ್ಲೇ ಹುಟ್ಟಿ ಬರುತ್ತಾರಂತೆ. ಹಾಗೆಂದು ಸ್ವತಃ ದಲೈ ಲಾಮಾ ಅವರೇ ಕಳೆದ ವಾರ ಹೇಳಿಕೆ ನೀಡಿದ್ದಾರೆ. ಅವರಿಗೀಗ 83 ವರ್ಷ. 'ನಾನು ಸತ್ತ ಬಳಿಕ ಪುನರ್ಜನ್ಮ ಭಾರತದಲ್ಲಿಯೇ ಕಾಣಿಸಿಕೊಳ್ಳಲಿದೆ. ಇತರ ಯಾರನ್ನೇ ಆಗಲಿ ನನ್ನ ಉತ್ತರಾಧಿಕಾರಿ ಎಂದು ಚೀನಾ ಸರ್ಕಾರ ಪ್ರಕಟಿಸಿದರೆ ಅದನ್ನು ಒಪ್ಪಿಕೊಳ್ಳಬೇಡಿ' ಎಂದು ಅವರೇ ಸಂದರ್ಶನವೊಂದರಲ್ಲಿ ಹೇಳಿದ್ದಾರೆ.

ಚೀನಾ ಸರ್ಕಾರ ಮತ್ತು ದಲೈ ಲಾಮಾ ನಡುವಣ ಸಂಘರ್ಷ ಇಂದು ನಿನ್ನೆಯದಲ್ಲ. ಅವರು ಚೀನಾದ ಪ್ರಭುತ್ವದ ಕೆಂಗಣ್ಣಿನಿಂದ ತಪ್ಪಿಸಿಕೊಂಡು ಭಾರತಕ್ಕೆ ಓಡಿಬಂದದ್ದು 1959ರಲ್ಲಿ. ಅಂದರೆ 60 ವರ್ಷಗಳಾದವು. 'ಟಿಬೆಟ್‌ಗೆ ಸ್ವಾಯತ್ತೆ ನೀಡಲಾಗದು, ಅದು ಚೀನಾದ ಅವಿಭಾಜ್ಯ ಅಂಗ' ಎಂದು ಚೀನಾ ಸರ್ಕಾರ ಫರ್ಮಾನು ಹೊರಡಿಸಿದಾಗ ಟಿಬೆಟಿಯನ್ನರ ಪ್ರತಿಭಟನೆ ಶುರುವಾಗಿ, ಪೊಲೀಸರ ಬಂಧನವನ್ನು ತಪ್ಪಿಸಿಕೊಳ್ಳಲು ದಲೈ ಲಾಮಾಗೆ ಭಾರತಕ್ಕೆ ಪಲಾಯನ ಮಾಡುವುದರ ಹೊರತು ಬೇರೆ ದಾರಿ ಇರಲಿಲ್ಲ.

ಟಿಬೆಟಿಯನ್ ಬೌದ್ಧ ಧರ್ಮದ ಹಲವು ಮಾರ್ಗಗಳಲ್ಲಿ ಗೆಲುಗ್ ಪಂಥವೂ ಒಂದು. ಗೆಲುಗ್ ಬಿಕ್ಕುಗಳಲ್ಲಿ ಒಬ್ಬ ಬಿಕ್ಕುವನ್ನು ಟಿಬೆಟಿಯನ್ ಬೌದ್ಧರ ಸರ್ವೋಚ್ಚ ಧಾರ್ಮಿಕ ನಾಯಕನಾಗಿ ಪರಿಗಣಿಸಿ ದಲೈ ಲಾಮಾ ಎಂದು ಘೋಷಿಸಲಾಗುತ್ತದೆ. ಟೆಂಝಿನ್ ಗ್ಯಾಟ್ಸೊ ಹಾಗೆ ದಲೈ ಲಾಮಾ ಎಂದು ಘೋಷಣೆಯಾದಾಗ ಇನ್ನೂ ಆತನಿಗೆ ಎರಡು ವರ್ಷ ವಯಸ್ಸು. ಆ ಪುಟ್ಟ ಮಗುವಿನ ಹೆಸರೂ ಸಣ್ಣದಲ್ಲ– ಜೆಟ್ಸನ್ ಜಾಂಫೆಲ್ ಗ್ವಾಂಗ್ ಲೊಬ್ಸಾಂಗ್ ಯೆಶೆ ಟೆಂಝಿನ್ ಗ್ಯಾಟ್ಸೊ ಎಂದು! (ಬರ್ತ್‌ಡೇ ಜುಲೈ 6, 1935) ಲಕ್ಷಾಂತರ ಟಿಬೆಟಿಯನ್ನರು ಆರಾಧಿಸುವ ಪುಟ್ಟ ದಲೈ ಲಾಮಾನನ್ನು ಕಣ್ಣ ಪಾಪೆಯಂತೆ ಕಾಪಾಡಿ, ಕೊನೆಗೆ 15ರ ಹರೆಯದಲ್ಲಿ ರಾಜಕೀಯ, ಧಾರ್ಮಿಕ ಅಧಿಕಾರ ನಿರ್ವಹಿಸುವ ವಿಧಿವಿಧಾನಗಳನ್ನು ನೆರವೇರಿಸಲಾಯಿತು.

ಈಗಿನ ದಲೈ ಲಾಮಾ 14ನೆಯವರು. ಈಗಾಗಲೇ 13 ಮಂದಿ ದಲೈ ಲಾಮಾಗಳು ಬಂದು ಹೋಗಿದ್ದಾರೆ. ಆದರೆ 14ನೇ ದಲೈ ಲಾಮಾಗೆ ಒದಗಿ ಬಂದಿರುವಂತಹ ಸಂದಿಗ್ಧಗಳು ಹಿಂದಿನವರಿಗೆ ಎದುರಾಗಿರಲಿಲ್ಲ. ಇವರಿಗೆಗೆ ಧಾರ್ಮಿಕ–ರಾಜಕೀಯ ಅಧಿಕಾರ ನೀಡಿದಾಗ ಚೀನಾ ಸರ್ಕಾರ ಸಮ್ಮತಿ ನೀಡಿತ್ತು. ಚೀನಾದ ಪ್ರಭುತ್ವದಿಂದ ಟಿಬೆಟ್‌ಗೆ ಸ್ವಾಯತ್ತೆ, ಸ್ವಾತಂತ್ರ್ಯ ಬೇಕು ಎಂದು ಪ್ರತಿಪಾದಿಸಿದ್ದೇ ಈಗಿನ ದಲೈ ಲಾಮಾ ಅವರ ವಿರುದ್ಧ ಚೀನಾ ಸರ್ಕಾರ ಕೆಂಗಣ್ಣು ಬೀರಲು ಕಾರಣವಾಯಿತು. 1959ರ ಮಾರ್ಚ್ ತಿಂಗಳಲ್ಲಿ ಚೀನಾ ಸರ್ಕಾರದ ಬಂಧನ ಯತ್ನದಿಂದ ತಪ್ಪಿಸಿಕೊಳ್ಳಲು ದಲೈ ಲಾಮಾ ಭಾರತಕ್ಕೆ ಬಂದರು. ಇಲ್ಲಿಯ ಸರ್ಕಾರ ಅವರಿಗೆ ರಕ್ಷಣೆ ನೀಡಿತು. ಅವರ ಜೊತೆಗೆ ಬಂದ ಲಕ್ಷಾಂತರ ಟಿಬೆಟಿಯನ್ನರಿಗೆ ಆಶ್ರಯ ನೀಡಿತು. ಹಿಮಾಚಲ ಪ್ರದೇಶದ ಧರ್ಮಶಾಲಾದಲ್ಲಿ ದಲೈ ಲಾಮಾ ಅವರ ಮುಖ್ಯ ಆಶ್ರಮವಿದೆ. ಕರ್ನಾಟಕದ ಕುಶಾಲನಗರದ ಬೈಲುಕುಪ್ಪೆ ಮತ್ತು ಉತ್ತರ ಕನ್ನಡದ ಮುಂಡಗೋಡದ ಟಿಬೆಟಿಯನ್ ಗ್ರಾಮದಲ್ಲಿ ಸಾವಿರಾರು ಜನ ನೆಲೆಸಿದ್ದಾರೆ. ಭಾರತದ ಪಾಸ್‌ಪೋರ್ಟ್‌ನಲ್ಲಿ ದಲೈ ಲಾಮಾ ವಿಶ್ವದಾದ್ಯಂತ ಸಂಚರಿಸುತ್ತಾರೆ.

ಮುಂದಿನ ದಲೈ ಲಾಮಾ ಬಗ್ಗೆ ವಿವಾದವಾಗುವುದು ಖಚಿತ. ಚೀನಾದ ಪ್ರಕಾರ, ಅಲ್ಲಿ ಎಲ್ಲ ಧರ್ಮಗಳಿಗೂ ಸಮಾನ ಅವಕಾಶಗಳಿವೆ, ರಾಜ್ಯಾಂಗದ ರಕ್ಷಣೆಯಿದೆ. 'ದಲೈ ಲಾಮಾ ನೇಮಕ ಒಂದು ಧಾರ್ಮಿಕ ಕ್ರಿಯೆ. ಅದಕ್ಕೆ ಅದರದ್ದೇ ಆದ ವಿಧಾನವಿದೆ. ಹಿಂದೆ 14ನೇ ದಲೈ ಲಾಮಾ ನೇಮಕವಾದಾಗಲೂ ನಡೆಸಲಾದ ಧಾರ್ಮಿಕ ಕ್ರಿಯೆಗೆ ಸರ್ಕಾರದ ಮಾನ್ಯತೆ ದೊರಕಿತ್ತು. ಮುಂದೆ ಯಾರೇ ದಲೈ ಲಾಮಾ ಆಗುವುದಾದರೂ ಸರ್ಕಾರದ ಸಮ್ಮತಿಮುದ್ರೆ ಆಗಲೇಬೇಕು' ಎನ್ನುವುದು ಚೀನಾ ಸರ್ಕಾರದ ಸಚಿವರ ಅಧಿಕೃತ ಹೇಳಿಕೆ. ಈಗಿನ ದಲೈ ಲಾಮಾ ಅವರ ನಿಧನಾನಂತರ ಉದ್ಭವಿಸಬಹುದಾದ ಬಿಕ್ಕಟ್ಟನ್ನು ಟಿಬೆಟಿಯನ್ ಬೌದ್ಧರು ಹೇಗೆ ಎದುರಿಸುತ್ತಾರೋ ನೋಡಬೇಕು. ಚೀನಾ ಪ್ರಭುತ್ವದ ವಿರೋಧದ ಹೊರತಾಗಿಯೂ ದಲೈ ಲಾಮಾ ವಿಶ್ವದಾದ್ಯಂತ ಜನಪ್ರಿಯತೆ ಗಳಿಸಿದ್ದಾರೆ. 1989ರಲ್ಲಿ ನೋಬೆಲ್ ಶಾಂತಿ ಪ್ರಶಸ್ತಿ ಅರಸಿಕೊಂಡು ಬಂತು. ಪ್ರತಿಷ್ಠಿತ 'ಟೈಮ್ ಮ್ಯಾಗಜಿನ್' ಅವರನ್ನು 'ಮಹಾತ್ಮ ಗಾಂಧಿಯ ಉತ್ತರಾಧಿಕಾರಿ' ಎಂದು ಬಣ್ಣಿಸಿತ್ತು. ಮುಂದಿನ ಜನ್ಮದಲ್ಲಿ ಅವರು ಭಾರತದ ಯಾವ ಭಾಗದಲ್ಲಿ ಹುಟ್ಟುತ್ತಾರೆ ಎನ್ನುವ ಕುತೂಹಲವೂ ಈಗ ಸೇರಿಕೊಂಡಿದೆ.

■ ಹನಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65